ಇ-ಮೇಲ್ ಮುಖಾಂತರ.

ಕರ್ನಾಟಕ ಸರ್ಕಾರ
(ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಸಂಖ್ಯೆ: Comp/09/2003-04

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
8ನೇ ಮಹಡಿ, ಕಂದಾಯ ಭವನ
ಕೆಂಪೇಗೌಡ ರಸ್ತೆ, ಬೆಂಗಳೂರು-09.
ದಿನಾಂಕ:08-05-2015.

## ಸುತ್ತೋಲೆ - 24

**ವಿಷಯ:** ಕಾವೇರಿ-II ಯೋಜನೆಯಡಿ ಸಂಗ್ರಹಿಸಿ ಸ್ಥಾಪಿಸಿರುವ ಹಾರ್ಡವೇರ್‌ಗಳ ಸುರಕ್ಷಿತ ಬಳಕೆ ಕುರಿತು.

**ಉಲ್ಲೇಖ:** 1. ಈ ಕಛೇರಿಯ ಜ್ಞಾಪನ ಸಂಖ್ಯೆ: Comp/06/2003-04, ದಿನಾಂಕ: 17-11-2009 .
2. ಈ ಕಛೇರಿಯ ಜ್ಞಾಪನ ಸಂಖ್ಯೆ: Comp/06/2003-04, ದಿನಾಂಕ: 09-08-2010.
3. ಈ ಕಛೇರಿಯ ಜ್ಞಾಪನ ಸಂಖ್ಯೆ: Comp/09/2007-08, ದಿನಾಂಕ: 09-09-2008.

********

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಸೇವಾ ಪೂರೈಕೆದಾರರಾದ ಮೆ:ಹೆಚ್‌ಸಿಎಲ್ ಇನ್‌ಫೋಸಿಸ್ಟಮ್ ಲಿಮಿಟೆಡ್ ರವರು ಕಾವೇರಿ-II ಯೋಜನೆಯಡಿ ಸಂಗ್ರಹಿಸಿ, ಸ್ಥಾಪಿಸಿರುವ ಹೊಸ ಹಾರ್ಡವೇರ್‌ಗಳು ಹಾಗೂ ಇಲಾಖೆಯು 2011ರ ಅಕ್ಟೋಬರ್ ಮತ್ತು ನಂತರ ಖರೀದಿಸಿರುವ ಹಾರ್ಡವೇರ್‌ಗಳಾದ Desk top, Thumb Scanner, Printer , Web Camera , UPS Battery, ಜನರೇಟರ್ ಇವುಗಳನ್ನು ಮೆ:ಹೆಚ್‌ಸಿಎಲ್ ಇನ್‌ಫೋಸಿಸ್ಟಮ್ ಲಿಮಿಟೆಡ್ ರವರು ದಿನಾಂಕ: 15-02-2014 ರಿಂದ ನಿರ್ವಹಣೆ ಮಾಡುತ್ತಿದ್ದು, ಈ ಎಲ್ಲಾ ಹಾರ್ಡವೇರ್‌ಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ರಕ್ಷಿಸಿಕೊಂಡು ಹೋಗುವ ಜವಾಬ್ದಾರಿಯು ಆಯಾಯ ಕಛೇರಿಯ ಮುಖ್ಯಸ್ಥರ ಕರ್ತವ್ಯವಾಗಿರುತ್ತದೆ.

ಕೆಲವು ಉಪ-ನೋಂದಣಿ ಕಛೇರಿಯಲ್ಲಿ ಬ್ಯಾಟರಿ ಕಳುವಾದ ಬಗ್ಗೆ ಹಾಗೂ ಕೆಲವು ಉಪ-ನೋಂದಣಿ ಕಛೇರಿ ಹಾಗೂ ಜಿಲ್ಲಾ ನೋಂದಣಿ ಕಛೇರಿಗಳಲ್ಲಿ ಮದರ್ ಬೋರ್ಡ್ ಸುಟ್ಟು ಹೋದ ಬಗ್ಗೆ ವರದಿಗಳು ಬಂದಿರುತ್ತದೆ.

ಈ ಹಿಂದೆ ಕೇಂದ್ರ ಕಛೇರಿಯಿಂದ ಉಲ್ಲೇಖಗಳಂತೆ ವಿದ್ಯುತ್‌ಶಾರ್ಟ್ ಸರ್ಕ್ಯೂಟ್ / ಬೆಂಕಿ ಆಕಸ್ಮಿಕ ಇತ್ಯಾದಿ ದುರ್ಘಟನೆಗಳ ಸಂಬಂಧವಾಗಿ ಮುಂಜಾಗ್ರತ ಕ್ರಮ ಕೈಗೊಳ್ಳುವ ಬಗ್ಗೆ ಸುತ್ತೋಲೆಗಳನ್ನು ಹೊರಡಿಸಿದ್ದು, ಅದರಂತೆ ಪಾಲಿಸಿಕೊಂಡು ಹೋಗಲು ಸೂಚಿಸಿದೆ ಹಾಗೂ ಕಾವೇರಿ-II ರಡಿಯಲ್ಲಿ ಸಂಗ್ರಹಿಸಿ ಸ್ಥಾಪಿಸಿರುವ ಸಂಪನ್ಮೂಲಗಳನ್ನು ಕಳುವಾಗದ ರೀತಿಯಲ್ಲಿ ಸಂರಕ್ಷಿಸಿಕೊಂಡು ಹೋಗಲು ಸೂಚಿಸಿದೆ.

ಹಾಗೇನಾದರೂ ಇನ್ನು ಮುಂದೆ ಬ್ಯಾಟರಿ ಕಳ್ಳತನ, ಮದರ್ ಬೋರ್ಡ್ ಸುಟ್ಟು ಹೋಗುವುದು, ಶಾರ್ಟ್ ಸರ್ಕ್ಯೂಟ್ ಮುಂತಾದ ಅವಘಡಗಳು ಸಂಭವಿಸದಂತೆ ಮುಂಜಾಗ್ರತ ಕ್ರಮಗಳನ್ನು ವಹಿಸಲು ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಉಪ-ನೋಂದಣಾಧಿಕಾರಿಗಳಿಗೆ ಸೂಚಿಸಿದೆ. ತಪ್ಪಿದಲ್ಲಿ ನಿರ್ಲಕ್ಷ್ಯತನ ತೋರಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

**ಪ್ರತಿ:**

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ. ಇ-ಮೇಲ್ ಮುಖಾಂತರ.
2. ರಾಜ್ಯದ ಎಲ್ಲಾ ಉಪ-ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ. ಇ-ಮೇಲ್ ಮುಖಾಂತರ